ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆವ ದಿನಾಂಕ	ಒಪ್ಪಿಗೆಯನ್ನು ನೀಡಿದವರು
1	2	3	4
4.	ಕರ್ನಾಟಕ ಕೊಳಚೆ ಪ್ರದೇಶಗಳ ಮೇಲ್ಪಾಟು ಮತ್ತು ನಿರ್ಮೂಲನಾ ಮತ್ತು ಇತರ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕ, 2002	6-9-2002	ರಾಜ್ಯಪಾಲರು
5.	ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುವಡಿ) ವಿಧೇಯಕ, 2002	6-9-2002	ರಾಜ್ಯಪಾಲರು

ಅಧ್ಯಕ್ಷರು :- ವಿಧೇಯಕಗಳ ಪಟ್ಟಿಯನ್ನು ಮಂಡಿಸಲಾಯಿತು.

ಪ್ರಕಟಣೆ

ವಿಷಯ :- ವಿಧಾನಸಭೆಯ ಕಾರ್ಯಕಲಾಪಗಳು

ಅಧ್ಯಕ್ಷರು :- ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸದಸ್ಯರುಗಳು ಹಾಗೂ ಎಲ್ಲಾ ಪಕ್ಷದ ನಾಯಕರುಗಳು ಬಯಸಿದಂತೆ ಸದನವನ್ನು ಈ ದಿನ ಮುಂದೂಡಿ ಪುನಃ ದಿನಾಂಕ: 3-03-2003ನೇ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಳ್ಳುತ್ತದೆಂದು ತಿಳಿಸಬಯಸುತ್ತೇನೆ.

ಈಗ ಸದನವನ್ನು ಸೋಮವಾರ ಬೆಳಿಗ್ಗೆ 11.00 ಗಂಟೆವರೆಗೆ ಮುಂದೂಡುತ್ತಿದ್ದೇನೆ. (ಸದನವು ಮಧ್ಯಹ್ನ 12 ಗಂಟೆ 34 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 3ನೇ ಮಾರ್ಚ್ ಮಾಹೆ 2003ರ ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

ಅನುಬಂಧ

(ಸನ್ಮಾನ್ಯ ರಾಜ್ಯಪಾಲರು ಮಾಡಿದ ಭಾಷಣದ ಕನ್ನಡ ರೂಪಾಂತರ)

ಸನ್ಮಾನ್ಯ ಸಭಾಪತಿಯವರೇ, ಸನ್ಮಾನ್ಯ ಸಭಾಧ್ಯಕ್ಷರೇ ಹಾಗೂ ಸನ್ಮಾನ್ಯ ಸದಸ್ಯರೇ,

1. ಕರ್ನಾಟಕ ವಿಧಾನ ಮಂಡಲದ ಜಂಟಿ ಅಧಿವೇಶನಕ್ಕೆ ನಿಮ್ಮೆಲ್ಲರನ್ನು ಸ್ವಾಗತಿಸಲು ನನಗೆ ತುಂಬ ಸಂತೋಷವಾಗುತ್ತಿದೆ. ಕಳೆದ ವರ್ಷ ವಿಶ್ವದಲ್ಲಿ, ನಮ್ಮ ರಾಷ್ಟ್ರದಲ್ಲಿ ಮತ್ತು ನಮ್ಮ ರಾಜ್ಯದಲ್ಲಿ ಅನೇಕ ದುರಂತ ಘಟನೆಗಳು ಸಂಭವಿಸಿದವು. ವಿಶ್ವ ವಾಣಿಜ್ಯ ಕೇಂದ್ರದ ದುರ್ಘಟನೆಯ ತರುವಾಯದ ಹಲವಾರು ಭಯೋತ್ಪಾದಕ ದಾಳಿಗಳು, ಸಂಸತ್ತಿನ ಮೇಲೆ ಮತ್ತು ಜಮ್ಮು ಕಾಶ್ಮೀರ ವಿಧಾನಸಭೆಯ ಮೇಲೆ ನಡೆದ ದಾಳಿಯ ಘಟನೆಗಳು ಪ್ರಪಂಚವನ್ನೇ ನಡುಗಿಸಿವೆ ಮತ್ತು ಸಂಭವಿಸಿದ ಸಾವು ನೋವುಗಳಿಂದ ಇಡೀ ವಿಶ್ವ ಶೋಕತಪ್ತವಾಗಿದೆ. ಗುಜರಾತ್ ಘಟನೆಯು ಕೋಮು ಸೌಹಾರ್ದವನ್ನು ಮೂಡಿಸುವ ದಿಸೆಯಲ್ಲಿ ಕಂಕಣಬದ್ಧರಾಗಿ ನಿರಂತರ ಶ್ರಮಿಸಬೇಕಾದ ಅಗತ್ಯತೆಗಳಿಗೆ ಒತ್ತು ನೀಡಿದೆ. ಕರ್ನಾಟಕದಲ್ಲಿ, ದುರಾದೃಷ್ಟವಶಾತ್, ಕಾಡುಗಳ್ಳ ವೀರಪ್ಪನ್‌ನಿಂದ ಮಾಜಿ ಸಚಿವ ಶ್ರೀ ನಾಗಪ್ಪನವರ ಅಪಹರಣದ ಘಟನೆ ನಡೆದಿದ್ದು ಇದು ಅಪಹೃತರ ಸಾವಿನೊಂದಿಗೆ ಕೊನೆಗೊಂಡಿತು. ನನ್ನ ಸರ್ಕಾರ ಇಂತಹ ಹೀನ ಕೃತ್ಯಗಳನ್ನು ಬಲವಾಗಿ ಖಂಡಿಸುತ್ತದೆ ಮತ್ತು ಇಂಥ ಘಟನೆಗಳು ಆಗದಂತೆ ತಪ್ಪಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವ ತನ್ನ ದೃಢ ನಿಲುವನ್ನು ಪುನ: ಒತ್ತಿಹೇಳುತ್ತದೆ. ಸರ್ಕಾರ ಸರ್ವ ಪ್ರಯತ್ನ ಮಾಡಿದರೂ ಶ್ರೀ ನಾಗಪ್ಪನವರ ಜೀವವನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲವೆಂಬುದು ಅತ್ಯಂತ ದು:ಖಕರ ಸಂಗತಿ.